ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

**ಸಂಖ್ಯೆ:-ಸಿ1(4)/ಸ.ಪ್ರೌ.ಮು.ಶಿ.ಸಾ.ವರ್ಗಾವಣೆ-48/2017-18** **ದಿನಾಂಕ:06-09-2018**

## ಅಧಿಕೃತ ಜ್ಞಾಪನ

**ವಿಷಯ:**-2017-18ನೇ ಸಾಲಿನ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಮಾಹಿತಿಯನ್ನು ಟಿ.ಡಿ.ಎಸ್. ತಂತ್ರಾಂಶದಲ್ಲಿ ನಮೂದಿಸಲು ಕಾಲಾವಕಾಶ ವಿಸ್ತರಿಸುತ್ತಿರುವ ಬಗ್ಗೆ.

**ಉಲ್ಲೇಖ:**1. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿ1[4]ಸ.ಪ್ರೌ.ಶಿ.ಸಾ.ವರ್ಗಾವಣೆ-48/2017-18 ದಿನಾಂಕ:05-07-2018, 10-08-2018, 13-08-2018.

&&&&

ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ವ್ಯಾಪ್ತಿಯಲ್ಲಿ ಮತ್ತು ರಾಜ್ಯಮಟ್ಟದ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳು ಟಿ.ಡಿ.ಎಸ್ ತಂತ್ರಾಂಶದಲ್ಲಿ ಮಾಹಿತಿಯನ್ನು ಇಂದೀಕರಿಸದಿರುವ ಅಂಶವನ್ನು ಮಾನ್ಯ ಆಯುಕ್ತರು ಗಂಭೀರವಾಗಿ ಪರಿಗಣಿಸಿರುತ್ತಾರೆ. ಆದುದರಿಂದ ಟಿ.ಡಿ.ಎಸ್.ನಲ್ಲಿ ಮಾಹಿತಿಯನ್ನು ಇಂದೀಕರಿಸದಿದ್ದಲ್ಲಿ ಅಥವಾ ನಮೂದಿಸಿರುವ ಮಾಹಿತಿ ತಪ್ಪಾಗಿದ್ದಲ್ಲಿ ಸರಿಪಡಿಸಲು ದಿನಾಂಕ:08-09-2018 ರಿಂದ 11-09-2018ರವರೆಗೆ ಅಂತಿಮ ಅವಕಾಶ ನೀಡಲಾಗಿದೆ.

ಗ್ರೂಪ್-ಬಿ ಭೋದಕ ವೃಂದದ ಆಧಿಕಾರಿಗಳು ಕರ್ತವ್ಯ ನಿರ್ವಹಿಸುವ ಶಾಲೆ/ಕಛೇರಿ ಆಯುಕ್ತರ ಕಛೇರಿ ಬೆಂಗಳೂರು/ಧಾರಾವಾಡ/ಕಲಬುರಗಿ, ಎಸ್.ಎಸ್.ಎ ಕಛೇರಿ, ಡಿ.ಎಸ್.ಇ.ಆರ್.ಟಿ ಹೊಸಕೆರೆಹಳ್ಳಿ, ಎಸ್.ಎಸ್.ಎಲ್.ಸಿ ಬೋರ್ಡ ಮಲ್ಲೇಶ್ವರಂ, ಟೆಕ್ಸ್ಟ್‌ಬುಕ್ ಸೊಸೈಟಿ ಹೊಸಕೆರೆಹಳ್ಳಿ, ಸಿಸ್‌ಲೆಪ್ ಧಾರವಾಡ, ಸಹನಿರ್ದೇಶಕರ ಕಛೇರಿ ಬೆಂಗಳೂರು/ಮೈಸೂರು, ನಿರ್ದೇಶಕರು ಮೈನಾರಿಟಿ, ಉಪನಿರ್ದೇಶಕರು[ಆಡಳಿತ], ಉಪನಿರ್ದೇಶಕರು[ಅಭಿವೃದ್ಧಿ], ಕ್ಷೇತ್ರ ಶಿಕ್ಷಣಾಧಿಕಾರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು, ಉಪಪ್ರಾಂಶುಪಾಲರು, ಬಿ.ಆರ್.ಸಿ, ಎಪಿಸಿಒ,[ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ], ಉಪನ್ಯಾಸಕರು ಟಿ.ಟಿ.ಐ ಮತ್ತು ಡಯಟ್, ವಿಷಯ ಪರಿವೀಕ್ಷಕರು, ಸಹಾಯಕ ನಿರ್ದೇಶಕರು[ಅಕ್ಷರ ದಾಸೋಹ], ಕಿರಿಯ ಕಾರ್ಯಕ್ರಮಾಧಿಕಾರಿಗಳು ಹಾಗೂ ವೇತನವನ್ನು ಸೆಳೆಯುವ ಎಲ್ಲಾ ಡಿ.ಡಿ.ಒಗಳು ಸಹ ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿ ಟಿ.ಡಿ.ಎಸ್. ಮಾಹಿತಿಯನ್ನು ಇಂದೀಕರಿಸದೇ ಇರುವವರು ಸಂಬಂಧಿಸಿದ ಮಾಹಿತಿ/ದಾಖಲೆಗಳೊಂದಿಗೆ ತಾಲ್ಲೂಕು/ಜಿಲ್ಲಾ ಕಛೇರಿ ಸಿಬ್ಬಂದಿಗಳು ಆಯುಕ್ತರ ಕಛೇರಿಗೆ ಈ ಕೆಳಕಂಡ ದಿನಾಂಕಗಳಲ್ಲಿ ಮುದ್ದಾಂ ಹಾಜರಾಗಿ ಟಿ.ಡಿ.ಎಸ್ ಮಾಹಿತಿಯನ್ನು ಇಂದೀಕರಿಸಲು ಕ್ರಮವಹಿಸುವುದು. ಇದರ ನಂತರವೂ ಟಿ.ಡಿ.ಎಸ್ ನಲ್ಲಿ ಮಾಹಿತಿ ದಾಖಲುಮಾಡಲು ಬಾಕಿ ಉಳಿದು ಕೋರಿಕೆ ವರ್ಗಾವಣೆ ಹಾಗೂ ಕಡ್ಡಾಯ ವರ್ಗಾವಣೆಯ ಪ್ರಕ್ರಿಯೆಗೆ ಆಡಳಿತಾತ್ಮಕ ತೊಂದರೆಯಾದಲ್ಲಿ ಸಂಬಂಧಪಟ್ಟ ಗ್ರೂಪ್-ಬಿ ಅಧಿಕಾರಿ ಮತ್ತು ನಂತರದ ಮೇಲಾಧಿಕಾರಿಗಳು/ಉಪನಿರ್ದೇಶಕರು[ಆಡಳಿತ], ಉಪನಿರ್ದೇಶಕರು[ಅಭಿವೃದ್ಧಿ] ನೇರವಾಗಿ ಜವಾಬ್ದಾರಿಯನ್ನಾಗಿ ಮಾಡಲಾಗುವುದಲ್ಲದೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

**ಟಿ.ಡಿ.ಎಸ್.ನಲ್ಲಿ ಸರ್ಕಾರಿ ಪೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್ ಬಿ ವೃಂದದ ಅಧಿಕಾರಿಗಳ ಮಾಹಿತಿಯನ್ನು ಇಂದೀಕರಿಸಿಲು ವೇಳಾಪಟ್ಟಿ**



Scanned by CamScanner

ದಿನಾಂಕ:08-09-2018 ಬೆಂಗಳೂರು ವಿಭಾಗ,
ದಿನಾಂಕ:09-09-2018 ಮೈಸೂರು ವಿಭಾಗ,
ದಿನಾಂಕ:10-09-2018 ಧಾರವಾಡ ವಿಭಾಗ,
ದಿನಾಂಕ:11-09-2018 ಕಲಬುರಗಿ ವಿಭಾಗ,

Philomenah
[ಫಿಲೋಮಿನಾ ಲೋಬೊ]
ನಿರ್ದೇಶಕರು[ಪ್ರೌಢ ಶಿಕ್ಷಣ]

ಇವರಿಗೆ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು[ಅಭಿವೃದ್ಧಿ] ರವರಿಗೆ ತುರ್ತು ಕ್ರಮಕ್ಕಾಗಿ

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
8. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು.
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ)/ಡಯಟ್ ಪ್ರಾಂಶುಪಾಲರು, ಸಾ.ಶಿ.ಇಲಾಖೆ.
12. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
13. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
14. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
15. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ. 16.ಕಛೇರಿ ಪ್ರತಿ.

Scanned by CamScanner

| district_ename | SANCTION | INFORMATION UPDATED IN TDS UPTO 06-09-2018 |
|---|---|---|
| Bangalore North | 67 | 67 |
| Bangalore Rural | 90 | 77 |
| Bangalore South | 109 | 107 |
| Chamrajnagar | 105 | 92 |
| Chikballapur | 152 | 90 |
| Chikmagalur | 134 | 105 |
| Chitradurga | 129 | 119 |
| Dakshina Kannada | 173 | 69 |
| Davangere | 167 | 141 |
| Hassan | 223 | 183 |
| Kodagu | 71 | 34 |
| Kolar | 151 | 82 |
| Madhugiri | 113 | 91 |
| Mandya | 213 | 178 |
| Mysore | 266 | 235 |
| Ramnagara | 120 | 104 |
| Shimoga | 175 | 149 |
| Tumkur | 151 | 127 |
| Udupi | 105 | 63 |

ದಿನಾಂಕ 06–09–2018ರವರೆಗೆ ಜಿಲ್ಲಾವಾರು ಟಿ.ಡಿ.ಎಸ್ ತಂತ್ರಾಂಶದಲ್ಲಿ ಗ್ರೂಪ್–ಬಿ ಅಧಿಕಾರಿಗಳ ಸೇವಾ ಮಾಹಿತಿ ಸೇರ್ಪಡೆಯಾಗಿರುವ ಮಾಹಿತಿ ಇಲ್ಲಿ ನಮೂದಿಸಿದೆ.  ಉಳಿದಿರುವ ಅಧಿಕಾರಿಗಳ ಮಾಹಿತಿ ಸೇರ್ಪಡೆ ಮಾಡಲು ದಿನಾಂಕ 07–09–2018 ರಂದು ನಡೆದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯಲ್ಲಿ ತಿಳಿಸಿರುವಂತೆ ಕ್ರಮವಹಿಸುವುದು.

Scanned by CamScanner